## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಸ್.ಎನ್. ಮಠ, ಕಾನಿಅ ತಾಪಂ. ಗಂಗಾವತಿ, ಕೊಪ್ಪಳ ಜಿಲ್ಲೆ, ಮತ್ತು ಶ್ರೀ ರವಿಕುಮಾರ್ ಡಿ. ಎನ್. ಸಹಾಯಕ ಇಂಜಿನಿಯರ್, ತಾಪಂ. ಗಂಗಾವತಿ, ಕೊಪ್ಪಳ ಜಿಲ್ಲೆ ಹಾಗೂ ಶ್ರೀ ಮಂಜುನಾಥ್, ಪಿಡಿಓ ಚಿಕ್ಕಜಂತಕಲ್ ಗ್ರಾಮ ಪಂಚಾಯತಿ ಗಂಗಾವತಿ, ತಾಲ್ಲೂಕು ಕೊಪ್ಪಳ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣೆ ಬಗ್ಗೆ.

ಓದಲಾಗಿದೆ: 1) ಮಾನ್ಯ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿ ಸಲ್ಲಿಸಿರುವ ವರದಿ ದಿ:17-04-2015.
2) ಅಪರ ನಿಬಂಧಕರು, ವಿಚಾರಣೆಗಳು-3 ಕರ್ನಾಟಕ ಲೋಕಾಯುಕ್ತ ಇವರ ಅ.ಸ.ಪತ್ರ ಸಂಖ್ಯೆ: ಕಂಪ್ಲೆಂಟ್/ ಉಪಲೋಕ್/ಜಿಎಲ್‌ಬಿ/2922/ 2012/ಎಆರ್‌ಇ-3 ದಿನಾಂಕ:22-04-2015.

------

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಪತ್ರದ ಜೊತೆಗೆ ಅಪರ ನಿಬಂಧಕರು, ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ, ಇವರು ಮಾನ್ಯ ಉಪ ಲೋಕಾಯುಕ್ತ ರವರ ಕಲಂ 12(3) ರ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ ಮಾನ್ಯ ಉಪ ಲೋಕಾಯುಕ್ತರವರ ವರದಿಯನ್ವಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಗಂಗಾವತಿ ತಾಲ್ಲೂಕು ಚಿಕ್ಕಜಂತಕಲ್ ಗ್ರಾಮದಲ್ಲಿ 2011-12 ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೂ. 3.25 ಲಕ್ಷಗಳಲ್ಲಿ ಸುಬ್ಬಮ್ಮನ ಮನೆಯಿಂದ ಬಿ. ಶರಣಪ್ಪಗೌಡರ ಮನೆಯವರೆಗೆ ಗಟಾರ್ ನಿರ್ಮಿಸಲು ಅಂದಾಜು ತಯಾರಿಸಲಾಗಿರುತ್ತದೆ. ಆದರೆ, ವರ್ಕ್‌ಕೋಡ್ ನಂ. 1520001011 ಎಫ್‌ಪಿ/9965442262 ರಲ್ಲಿ ರೂ. 1,42,500/- ಮತ್ತು ವರ್ಕ್‌ಕೋಡ್ ನಂ. 1520001011 ಎಫ್‌ಪಿ/9945042262 ರಲ್ಲಿ ರೂ. 1,37,882/- ಒಟ್ಟು ರೂ. 2,80,382/- ಗಳನ್ನು ಕಾಮಗಾರಿ ನಿರ್ವಹಿಸದೇ ಈ ಕೆಳಕಂಡ ಅಧಿಕಾರಿ/ನೌಕರರು/ಅಧಿಕಾರೇತರರು ದುರುಪಯೋಗ ಪಡಿಸಿಕೊಂಡಿದ್ದು, ಇವರುಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಕ್ರಮ ಜರುಗಿಸಲು ಕೋರಿ ಶ್ರೀ ಬಸವರಾಜ ಭೀಮನಗೌಡ ಕರಡಿಕಲ್ ಸಾ: ಚಿಕ್ಕಜಂತಕಲ್ ಗ್ರಾಮ ಗಂಗಾವತಿ ತಾಲ್ಲೂಕು ಇವರು ಲೋಕಾಯುಕ್ತ ಕಛೇರಿಯಲ್ಲಿ ದೂರು ದಾಖಲಿಸಿರುತ್ತಾರೆ.

1. ಶ್ರೀ ಎಸ್.ಎನ್. ಮಠ, ಕಾನಿಅ ತಾಪಂ. ಗಂಗಾವತಿ, ಕೊಪ್ಪಳ ಜಿ.
2. ಶ್ರೀ ರವಿಕುಮಾರ್ ಡಿ. ಎನ್. ಸಹಾಯಕ ಇಂಜಿನಿಯರ್, ತಾಪಂ. ಗಂಗಾವತಿ, ಕೊಪ್ಪಳ ಜಿಲ್ಲೆ.
3. ಶ್ರೀ ಮಂಜುನಾಥ್, ಪಿಡಿಓ ಚಿಕ್ಕಜಂತಕಲ್ ಗ್ರಾಮ ಪಂಚಾಯತಿ, ಗಂಗಾವತಿ ತಾಲ್ಲೂಕು ಕೊಪ್ಪಳ ಜಿಲ್ಲೆ.
4. ಶ್ರೀ ದಾನಪ್ಪ ಅಯೋಧ್ಯ, ಅಧ್ಯಕ್ಷರು, ಚಿಕ್ಕಜಂತಕಲ್ ಗ್ರಾಮ, ತಾಪಂ. ಗಂಗಾವತಿ, ಕೊಪ್ಪಳ ಜಿಲ್ಲೆ.

ಸದರಿ ದೂರಿನ ಬಗ್ಗೆ ಪೋಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೊಪ್ಪಳ ಇವರು ತನಿಖೆ ಮಾಡಿ ಸಲ್ಲಿಸಿರುವ ತನಿಖಾ ವರದಿಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವರ್ಕ್‌ಕೋಡ್ ನಂ. 1520001011 ಎಫ್‌ಪಿ/9945042262 ಕ್ಕೆ ಸಂಬಂಧಪಟ್ಟಂತೆ ಅಂದಾಜು ರೂ. 2,80,382/- ಗಳನ್ನು ಖರ್ಚು ಮಾಡಿದ್ದು, ಸುಬ್ಬಮ್ಮನ ಮನೆಯಿಂದ ಅರ್ಜಿದಾರರ ಮನೆಯವರೆಗೆ ಗಟಾರ್ ನಿರ್ಮಿಸಿದ್ದು, ಮುಂದೆ ಶರಣಪ್ಪಗೌಡರ ಮನೆಯವರೆಗೆ 30 ಅಡಿ ಗಟಾರ್ ನಿರ್ಮಿಸಿರುವುದಿಲ್ಲ. ಆದ್ದರಿಂದ ದೂರುದಾರರು ಸಲ್ಲಿಸಿರುವ ದೂರಿನಲ್ಲಿ ಸತ್ಯಾಂಶವಿದ್ದು ಮುಂದಿನ ಕ್ರಮ ಕೈಗೊಳ್ಳಬಹುದೆಂದು ಕೋರಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿ / ಮಾಹಿತಿಗಳನ್ನು ಪರಿಶೀಲಿಸಿದಾಗ, ಮೇಲ್ಕಂಡ ನಾಲ್ವರು ಸದರಿ ಯೋಜನೆಯಡಿ ಸುಬ್ಬಮ್ಮನ ಮನೆಯಿಂದ ಅರ್ಜಿದಾರರ ಮನೆಯವರೆಗೆ ಗಟಾರ್ ನಿರ್ಮಿಸಿದ್ದು, ಮುಂದೆ ಶರಣಪ್ಪಗೌಡರ ಮನೆಯವರೆಗೆ 30 ಅಡಿ ಗಟಾರ್ ನಿರ್ಮಿಸದೇ, ಕರ್ತವ್ಯ

ಲೋಪವೆಸಗಿರುತ್ತಾರೆ. ಆದ್ದರಿಂದ ಮೇಲಿನ ಕ್ರಮ ಸಂಖ್ಯೆ (1) ರಿಂದ (3) ರವರೆಗಿನ ಅಧಿಕಾರಿ/ನೌಕರರು, ಕ.ನಾ.ಸೇ.(ನಡತೆ) ನಿಯಮಗಳು 3(1)ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಹಾಗೂ ಸದರಿಯವರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಸಾಕಷ್ಟು ದಾಖಲಾತಿ / ಪುರಾವೆಗಳು ಇರುವುದರಿಂದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ-14(ಎ) ರಡಿಯಲ್ಲಿ ತಮಗೆ ವಹಿಸುವಂತೆ ಮಾನ್ಯ ಉಪ ಲೋಕಾಯುಕ್ತ ರವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆಂದು ಮತ್ತು ಕ್ರಮ ಸಂಖ್ಯೆ (4) ರ ಶ್ರೀ ದಾನಪ್ಪ ಅಯೋಧ್ಯ, ಚಿಕ್ಕಜಂತಕಲ್ ಗ್ರಾಮ ತಾಪಂ. ಗಂಗಾವತಿ, ಕೊಪ್ಪಳ ಜಿಲ್ಲೆ ಇವರು ಸರ್ಕಾರಿ ನೌಕರರಲ್ಲದ ಕಾರಣ ಅವರ ವಿರುದ್ಧ ಸಿಸಿಎ ನಿಯಮಗಳಡಿ ಶಿಸ್ತು ಕ್ರಮ ಜರುಗಿಸಲು ಅವಕಾಶವಿಲ್ಲದೇ ಇರುವುದರಿಂದ ಪಂ. ರಾಜ್ ಕಾಯ್ದೆ 1993 ಕಲಂ 43(ಎ) ರಡಿ ಕ್ರಮ ಕೈಗೊಳ್ಳಲು ಮಾನ್ಯ ಉಪ ಲೋಕಾಯುಕ್ತ ರವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆಂದು ಅಪರ ನಿಬಂಧಕರು, ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ ಇವರು ತಿಳಿಸಿರುತ್ತಾರೆ.

ಸರ್ಕಾರವು ಮಾನ್ಯ ಉಪ ಲೋಕಾಯುಕ್ತ ರವರ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಶ್ರೀ ದಾನಪ್ಪ ಅಯೋಧ್ಯ, ಚಿಕ್ಕಜಂತಕಲ್ ಗ್ರಾಮ ತಾಪಂ. ಗಂಗಾವತಿ, ಕೊಪ್ಪಳ ಜಿ ಇವರು ಸರ್ಕಾರಿ ನೌಕರರಲ್ಲದ ಕಾರಣ ಅವರ ವಿರುದ್ಧ ಸಿಸಿಎ ನಿಯಮಗಳಡಿ ಶಿಸ್ತು ಕ್ರಮ ಜರುಗಿಸಲು ಅವಕಾಶವಿಲ್ಲದೇ ಇರುವುದರಿಂದ ಪಂ. ರಾಜ್ ಕಾಯ್ದೆ 1993 ಕಲಂ 43(ಎ) ರಡಿ ಕ್ರಮ ಕೈಗೊಳ್ಳಲು ಮಾನ್ಯ ಉಪ ಲೋಕಾಯುಕ್ತ ರವರ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ನಿರ್ದೇಶಕರು, ಪಂ. ರಾಜ್ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ಕಳುಹಿಸಲಾಗಿದೆ. ಉಳಿದಂತೆ ಮೇಲಿನ ಕ್ರಮ ಸಂಖ್ಯೆ: (1) ರಿಂದ (3) ರವರೆಗಿನ ಅಧಿಕಾರಿ/ನೌಕರರುಗಳ ವಿರುದ್ಧದ ಆರೋಪಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957ರ ನಿಯಮ-11 ರಡಿಯಲ್ಲಿ ಇಲಾಖಾ ವಿಚಾರಣೆ ಜರುಗಿಸಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ(ವ.ನಿ.ಮೇ) ನಿಯಮಾವಳಿಗಳು 1957ರ ನಿಯಮ-14(ಎ) ರಪ್ರಕಾರ ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 126 ವಿಸೇಬಿ 2015 ಬೆಂಗಳೂರು ದಿನಾಂಕ:29-05-2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧದ ದುರ್ನಡತೆಗೆ ಸಂಬಂಧಿಸಿದ ಆರೋಪಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 11 ರನ್ವಯ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸಲು, ಪ್ರಕರಣವನ್ನು ಸದರಿ ನಿಯಮಾವಳಿಗಳ ನಿಯಮ 14(ಎ)ರನ್ವಯ ಮಾನ್ಯ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರಿಗೆ ವಹಿಸಿ ಆದೇಶಿಸಿದೆ.

1. ಶ್ರೀ ಎಸ್.ಎನ್. ಮಠ, ಕಾನಿಅ-ತಾಪಂ. ಗಂಗಾವತಿ, ಕೊಪ್ಪಳ ಜಿ.
2. ಶ್ರೀ ರವಿಕುಮಾರ್ ಡಿ. ಎನ್. ಸಹಾಯಕ ಇಂಜಿನಿಯರ್, ತಾಪಂ. ಗಂಗಾವತಿ, ಕೊಪ್ಪಳ ಜಿ.
3. ಶ್ರೀ ಮಂಜುನಾಥ್, ಪಿಡಿಓ ಚಿಕ್ಕಜಂತಕಲ್ ಗ್ರಾಮ ಪಂಚಾಯತಿ, ಗಂಗಾವತಿ,ತಾಲ್ಲೂಕು ಕೊಪ್ಪಳ ಜಿಲ್ಲೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ.ಬಿ &ಸಿ.)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ: 1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.

60

2. ಅಪರ ನಿಬಂಧಕರು, ವಿಚಾರಣೆಗಳು-3 ಮಾನ್ಯ ಕರ್ನಾಟಕ ಲೋಕಾಯುಕ್ತ ರವರ ಕಛೇರಿ. ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೊಪ್ಪಳ.

**ಪ್ರತಿಗಳು ಮಾಹಿತಿಗಾಗಿ :**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್)/ಜಂಟಿ ಕಾರ್ಯದರ್ಶಿ (ಆಡಳಿತ). ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

GO